# ವಿವಾದದಲ್ಲಿ ಸೂರ್ಯ



ತಮಿಳು ಚಿತ್ರರಂಗದ ಜನಪ್ರಿಯ ಸ್ಟಾರ್‌ಗಳಲ್ಲಿ ಒಬ್ಬರಾದ ಸೂರ್ಯ ಬೆಳ್ಳಿತೆರೆಯಲ್ಲಿ ಸಿಟ್ಟಿಗೇಳುವುದು ಹೊಸದೇನಲ್ಲ. ಆದರೆ ಈಗ ಅವರು ಬೆಳ್ಳಿತೆರೆಯ ಹೊರಗೂ ಸಿಟ್ಟಿನಿಂದ ಕುದಿಯುತ್ತಿದ್ದಾರೆ. ಅವರ ಸಿಟ್ಟು ಸುಪ್ರೀಂಕೋರ್ಟಿನ ಮೇಲೆ! 'ಕೊರೊನಾ ಹಾವಳಿ ಉಂಟು ಮಾಡಿರುವ ಜೀವಭಯದ ಮಧ್ಯೆಯೇ ನೀಟ್ ಪರೀಕ್ಷೆ ಬರೆಯುವಂತೆ ಸುಪ್ರೀಂಕೋರ್ಟ್ ವಿದ್ಯಾರ್ಥಿಗಳನ್ನು ಬಲವಂತ ಮಾಡಿದೆ' ಎನ್ನುವುದು ಸೂರ್ಯ ನೀಡಿರುವ ಹೇಳಿಕೆ. 'ಕೊರೊನಾ ವೈರಸ್ ಭಯದಿಂದಾಗಿ ಕೋರ್ಟ್‌ಗಳು ವಿಡಿಯೋ ಕಾನ್ಫರೆನ್ಸ್‌ಗಳ ಮೂಲಕ ಈಗ ನ್ಯಾಯ ನೀಡುತ್ತಿವೆ. ಆದರೆ ವಿದ್ಯಾರ್ಥಿಗಳಿಗೆ ಭಯವಿಲ್ಲದೆ ಹೋಗಿ ಪರೀಕ್ಷೆ ಬರೆಯಿರಿ ಎಂದಿದ್ದಾರೆ' ಎಂದು ಸೂರ್ಯ ವ್ಯಂಗ್ಯವಾಡಿದ್ದಾರೆ.

ಈ ಹೇಳಿಕೆಯು ತಮಿಳ್ನಾಡಿನ ನ್ಯಾಯಾಂಗದಲ್ಲಿ ಕೋಲಾಹಲ ಎಬ್ಬಿಸಿದೆ. 'ಸುಪ್ರೀಂಕೋರ್ಟ್ ತೀರ್ಪಿನ ವಿರುದ್ಧದ ಈ ಹೇಳಿಕೆಯ ಮೂಲಕ ಸೂರ್ಯ ನ್ಯಾಯಾಂಗ ನಿಂದನೆ ಮಾಡಿದ್ದಾರೆ' ಎಂದು ಚೆನ್ನೈ ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರು ಕಿಡಿ ಕಾರಿದ್ದಾರೆ. ನ್ಯಾಯಾಂಗ ನಿಂದನೆ ಕೇಸ್ ಕೈಗೆತ್ತಿಕೊಳ್ಳುವಂತೆ ಅವರು ಸುಪ್ರೀಂ ಕೋರ್ಟಿಗೆ ಪತ್ರವನ್ನೂ ಬರೆದಿದ್ದಾರೆ. ಅದಕ್ಕೆ ವಿರುದ್ಧ ಎಂಬಂತೆ ಚೆನ್ನೈನ ಹಲವು ನಿವೃತ್ತ ನ್ಯಾಯಾಧೀಶರು ಸೂರ್ಯ ಬೆಂಬಲಕ್ಕೆ ನಿಂತಿದ್ದಾರೆ. ಸೂರ್ಯ ಅವರ ವಿರುದ್ಧ ನ್ಯಾಯಾಂಗ ನಿಂದನೆಯ ಪ್ರಕ್ರಿಯೆ ಜರುಗಿಸಿದರೆ ತಾವು ಸುಮ್ಮನಿರುವುದಿಲ್ಲ ಎಂದು ಎಚ್ಚರಿಕೆ ನೀಡಿದ್ದಾರೆ! ಈ ಪ್ರಕ್ರಿಯೆ ಕೈಬಿಡಿ ಎಂದೂ ಒತ್ತಾಯಿಸಿದ್ದಾರೆ.

ವೈದ್ಯಕೀಯ, ಡೆಂಟಲ್ ಮತ್ತು ಎಂಜಿನಿಯರಿಂಗ್ ಕಾಲೇಜುಗಳಿಗೆ ರಾಷ್ಟ್ರಮಟ್ಟದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಯಾದ ನೀಟ್ ವಿರುದ್ಧ ತಮಿಳ್ನಾಡಿನಲ್ಲಿ ಕಳೆದ ಒಂದೆರಡು ವರ್ಷಗಳಿಂದ ಅಸಮಾಧಾನ ಹೊಗೆಯಾಡುತ್ತಲೇ ಇದೆ. ಇದು ಈಗ ಕೇವಲ ವಿದ್ಯಾರ್ಥಿಗಳ ಪರೀಕ್ಷೆಯ ವಿಷಯವಾಗಿಯಷ್ಟೇ ಉಳಿದಿಲ್ಲ. ಏಕೆಂದರೆ ಈ ಸಲ ನೀಟ್ ಪರೀಕ್ಷೆಯ ಮುನ್ನಾದಿನ ಮೂವರು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿರುವುದು ವಿವಾದದ ಅಗ್ನಿಜ್ವಾಲೆಗೆ ತುಪ್ಪ ಸುರಿದಂತಾಗಿದೆ. ಸೂರ್ಯ ಹೇಳಿಕೆಗೆ ಈ ಹಿನ್ನೆಲೆಯಲ್ಲಿಯೇ ಹೆಚ್ಚು ಮಹತ್ವ ಲಭಿಸಿದೆ. 'ಈ ಮೂವರ ಕುಟುಂಬದ ಬಗ್ಗೆ ನನ್ನ ಹೃದಯ ಮಿಡಿಯುತ್ತಿದೆ. ಅವರ ನೋವನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ' ಎಂದಿದ್ದಾರೆ ಸೂರ್ಯ. ಟ್ವಿಟ್ಟರ್‌ನಲ್ಲಿ ಸೂರ್ಯ ಹೇಳಿಕೆಯನ್ನು ಲಕ್ಷಕ್ಕೂ ಹೆಚ್ಚು ಜನ ಬೆಂಬಲಿಸಿದ್ದಾರೆ. ಸಾವಿರಾರು ಜನ ರಿಟ್ವೀಟ್ ಮಾಡಿದ್ದಾರೆ.

ನೀಟ್ ಪರೀಕ್ಷೆಯ ವ್ಯವಸ್ಥೆಯೇ ಅಸಮಾನತೆಯಿಂದ ಕೂಡಿದೆ ಎನ್ನುವುದು ಸೂರ್ಯ ವಾದ. 'ಪ್ರತಿಯೊಬ್ಬರಿಗೂ ಸಮಾನ ಅವಕಾಶಗಳನ್ನು ಸೃಷ್ಟಿಸಬೇಕಾದ ಕೇಂದ್ರ ಸರಕಾರವೇ ಅಸಮಾನತೆಯ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಿದೆ, ಈ ಶಿಕ್ಷಣ ನೀತಿ ರೂಪಿಸಿದವರಿಗೆ ವಾಸ್ತವದ ಅರಿವಿಲ್ಲ, ಬಡವರು ಮತ್ತು ಕೆಳವರ್ಗದವರ ಬಗ್ಗೆ ಏನೂ ಗೊತ್ತಿಲ್ಲ' ಎಂದಿದ್ದಾರೆ.

ತಮಿಳು ನಟರಲ್ಲಿ ಬಹುತೇಕರು ತಮ್ಮದೇ ಆದ ರಾಜಕೀಯ ನಿಲುವುಗಳನ್ನು ಹೊಂದಿರುವುದು ಎದ್ದು ಕಾಣುವ ಅಂಶ. ಈ ವಿಷಯದಲ್ಲಿ ಅವರು ಬಾಲಿವುಡ್ ನಟರಂತೆ ಅನುಕೂಲಸಿಂಧು ಚಾಲಾಕಿತನ ಮೆರೆಯುವುದಿಲ್ಲ. ಅವರದ್ದೇನಿದ್ದರೂ ನೇರಾನೇರ ರಾಜಕೀಯ ನಡೆ. ತಮಿಳುನಾಡಿನಲ್ಲಿ ಚಿತ್ರನಟರು ರಾಜಕೀಯ ಅಧಿಕಾರ ಪಡೆಯುವುದು ಮತ್ತು ರಾಜಕೀಯ ಪಕ್ಷಗಳ ವಿರುದ್ಧ ಕಿಡಿಕಾರುವುದು ಸದಾ ನಡೆದಿದೆ. ಆದರೆ ಈಗ ಸೂರ್ಯ ಅವರದ್ದು ಸ್ವಲ್ಪ ವಿಭಿನ್ನ ನಡೆ. ಅವರ ಈ ನಡೆ ತಮಿಳ್ನಾಡಿನಲ್ಲಿ ಅವರಿಗೆ ಹೊಸದೊಂದು ಇಮೇಜನ್ನು ಸೃಷ್ಟಿಸುವಂತೆ ಕಾಣುತ್ತಿದೆ. ಮುಖ್ಯವಾಗಿ ವಿದ್ಯಾರ್ಥಿ ಯುವಜನರ ಮಧ್ಯೆ ಸೂರ್ಯ ಜನಪ್ರಿಯತೆ ಹೆಚ್ಚಾಗಿದೆ.

1997ರಲ್ಲಿ ವಸಂತ್ ನಿರ್ದೇಶನದ 'ನೇರುಕ್ಕು ನೇರ್' ಚಿತ್ರದ ಮೂಲಕ ತಮಿಳು ಚಿತ್ರರಂಗಕ್ಕೆ ಕಾಲಿಟ್ಟ ಸೂರ್ಯ 40ಕ್ಕೂ ಹೆಚ್ಚು ಕಮರ್ಷಿಯಲ್ ಮತ್ತು ಕ್ರಿಯೇಟಿವ್ ಚಿತ್ರಗಳಲ್ಲಿ ನಟಿಸಿದ್ದಾರೆ. ಅವರು ನಟಿಸಿದ 'ಘಜಿನಿ' ಚಿತ್ರ ಹಿಂದಿಯಲ್ಲಿ ರಿಮೇಕ್ ಆಗಿ ಅಮೀರ್‌ಖಾನ್‌ಗೂ ಕೀರ್ತಿ ತಂದಿತ್ತಿತು. ಹಾಗೆಯೇ ರೆಬೆಲ್ ಪೊಲೀಸ್ ಅಧಿಕಾರಿಯ ಪಾತ್ರದ 'ಸಿಂಗಂ' ತಮಿಳು ಮತ್ತು ತೆಲುಗು ಚಿತ್ರರಂಗದಲ್ಲಿ ಕಮರ್ಷಿಯಲ್ ಕಲ್ಟ್ ಸಿನಿಮಾ ಎನ್ನಿಸಿಕೊಂಡಿತು. '24' ಎನ್ನುವ ಸಿನಿಮಾ ದಕ್ಷಿಣ ಭಾರತದ ಅತ್ಯುತ್ತಮ ನಟ ಎನ್ನುವ ಫಿಲಂಫೇರ್ ಪ್ರಶಸ್ತಿ ತಂದುಕೊಟ್ಟಿತು. 9ಕ್ಕೂ ಹೆಚ್ಚು ಸಿನಿಮಾಗಳ ನಿರ್ಮಾಪಕರಾಗಿಯೂ ಜನಪ್ರಿಯತೆ ಪಡೆದಿರುವ ಸೂರ್ಯ, ಹಿಂದಿ ಸಿನಿಮಾಗಳಿಗೆ ಡಬ್ಬಿಂಗ್ ಮತ್ತು ನಿರೂಪಣೆ ಮಾಡಿದ್ದೂ ಇದೆ.

ಸೂರ್ಯ ನಟಿಸಿರುವ ಸಿನಿಮಾಗಳು ಕಳೆದ ಐದಾರು ವರ್ಷಗಳಿಂದ ಫ್ಲಾಪ್ ಆಗುತ್ತಿವೆ. ಈಗ 'ಸೂರರೈ ಪೊಟ್ರು' ಎನ್ನುವ ಸಿನಿಮಾ ಬಿಡುಗಡೆಗೆ ಸಿದ್ಧವಾಗಿದೆ. ಈ ಹಿನ್ನೆಲೆಯಲ್ಲಿ ಸುದ್ದಿಯಲ್ಲಿರಲು ಸೂರ್ಯ ಈ ನಾಟಕ ಆಡುತ್ತಿದ್ದಾರೆ ಎನ್ನುವ ಟೀಕೆಯೂ ಕೇಳಿಬಂದಿದೆ. ವಿವಾದಗಳು ಸೂರ್ಯ ಅವರಿಗೆ ಹೊಸತೇನಲ್ಲ. ಕಳೆದ ವರ್ಷ ಜಲ್ಲಿಕಟ್ಟು ಕ್ರೀಡೆಯ ನಿಷೇಧದ ವಿರುದ್ಧ ಸೂರ್ಯ ಕಿಡಿ ಕಾರಿದ್ದು, ಪ್ರಾಣಿ ರಕ್ಷಣೆಯ ಪೇಟಾ ಸಂಸ್ಥೆಯ ಜೊತೆಗೆ ಜಟಾಪಟಿಗೂ ಕಾರಣವಾಗಿತ್ತು. ತನ್ನ ಪತ್ನಿ ಚಿತ್ರನಟಿ ಜ್ಯೋತಿಕಾ 'ಜನರು ದೇವಸ್ಥಾನಗಳ ಹುಂಡಿಗೆ ಹಣ ಹಾಕಿದಂತೆಯೇ ಆಸ್ಪತ್ರೆ ಮತ್ತು ಶಾಲೆಗಳಿಗೂ ದಾನ ಮಾಡಬೇಕು' ಎಂದು ಸಿನಿಮಾ ಪ್ರಶಸ್ತಿ ಸಮಾರಂಭದಲ್ಲಿ ನೀಡಿದ ಹೇಳಿಕೆಯೊಂದು ವಿವಾದ ಎಬ್ಬಿಸಿದ್ದಾಗ, ಸೂರ್ಯ ಆಕೆಗೆ ಬೆಂಬಲವಾಗಿ ನಿಂತಿದ್ದರು. ಈಗ ನೀಟ್ ಪರೀಕ್ಷೆಯ ವಿಷಯದಲ್ಲಿ ಸೂರ್ಯ ಮಾಡಿರುವ ಸುಪ್ರೀಂ ಕೋರ್ಟಿನ ಟೀಕೆ ಯಾವ ತಿರುವು ಪಡೆದುಕೊಳ್ಳುವುದೋ ಎನ್ನುವ ಕುತೂಹಲ ಅಭಿಮಾನಿಗಳದ್ದು. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65